| | | |
|---|---|---|
| 17. | ಶ್ರೀ. ಮಂಜು | ಸಹಾಯಕ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ. |
| 18. | ಶ್ರೀ. ಮುನಿಸ್ವಾಮಯ್ಯ | ಸಹಾಯಕ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್, ಮಲ್ಲೇಶ್ವರಂ ಸಂಚಾರಿ ಪೋಲೀಸ್ ಠಾಣೆ. |
| 19. | ಸುಬ್ರಮಣ್ಯನಗರ ಪೋಲೀಸ್ ಠಾಣೆ. | ಗೈರು ಹಾಜರಿ. |
| 20. | ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆ. | ಗೈರು ಹಾಜರಿ. |
| 21. | ಸಹಾಯಕ ಅಭಿಯಂತರರು, ಬೆಸ್ಕಂ ಎನ್–7 ಉಪವಿಭಾಗ | ಗೈರು ಹಾಜರಿ. |
| 22. | ಅರಣ್ಯ ಇಲಾಖೆ ಸಿಬ್ಬಂದಿ | ಗೈರು ಹಾಜರಿ. |
| 23. | ಬೀದಿ ದೀಪ ನಿರ್ವಹಣೆ ಸಿಬ್ಬಂದಿ | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಆಗಸ್ಟ್ ಮಾಹೆಯ ದಿ: 20/08/2022 ರಂದು ಮಧ್ಯಾನ 3:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

| | |
|---|---|
| ಶ್ರೀ. ರಂಗರಾಜು<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಆರೋಗ್ಯ ಕೇಂದ್ರಗಳಲ್ಲಿ ಆಯುರ್ವೇದ ಹಾಗು ಹೋಮಿಯೋಪತಿ ಚಿಕಿತ್ಸೆ ಕೊಡುವ ವೈದ್ಯರನ್ನು ನೇಮಿಸುವುದರಿಂದ ಚಿಕಿತ್ಸೆ ತೆಗೆದುಕೊಳ್ಳುವ ಸಾರ್ವಜನಿಕರಿಗೆ ತುಂಬ ಅನುಕುಲವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಆರೋಗ್ಯ ವೈಧ್ಯಾಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ವಾರ್ಡ್‌ನ ಆರೋಗ್ಯ ಕೇಂದ್ರಗಳಲ್ಲಿ ನಾಗರೀಕರು ಕೋರುವಂತೆ ಆಯುರ್ವೇದ ಹಾಗು ಹೋಮಿಯೋಪತಿ ಚಿಕಿತ್ಸೆ ನೀಡುವ ವ್ಯವಸ್ತೆ ಕಲ್ಪಿಸಿಕೊಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು. |
| ಶ್ರೀ. ರಂಗರಾಜು<br>ವಾರ್ಡ್‌ನ ನಾಗರೀಕರು. | ವಾರ್ಡ್‌ನಲ್ಲಿ ಯೋಗಾಭ್ಯಾಸ ಮಾಡಲು ಜಾಗದ ಕೊರತೆ ಇರುವುದರಿಂದ ಉದ್ಯಾನಗಳಲ್ಲಿ ಯೋಗ ಮಾಡಲು ಪ್ರತ್ಯೇಕವಾದ ಜಾಗವನ್ನು ಗುರುತಿಸಿ ಅಲ್ಲಿ ವ್ಯವಸ್ತೆ ಕಲ್ಪಸಿಕೊಡಲು ಸಭೆಯಲ್ಲಿ ಕೋರಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರರು, ವಾರ್ಡ–67 | ವಾರ್ಡ್‌ನ ಉದಯಕುಮಾರ್ ಉದ್ಯಾನದ ಪಕ್ಕದಲ್ಲಿ ನಿರ್ಮಾಣ ಮಾಡುತ್ತಿರುವ ಬಿ.ಬಿ.ಎಂ.ಪಿ ಕಟ್ಟಡದಲ್ಲಿ ಯೋಗಾಭ್ಯಾಸ ಮಾಡಲು ಪ್ರತ್ಯೇಕವಾದ ಜಾಗವನ್ನು ಮಿಸಲಿಡಲಾಗಿದೆ ಎಂದು ಸಭೆಯಲ್ಲಿ ಮಾಹಿತಿ ಒದಗಿಸಿದರು. |
| ಶ್ರೀ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ಉದಯಕುಮಾರ್ ಉದ್ಯಾನದ ಹತ್ತಿರ ಎರಡು ಬೋರ್ವೆಲ್ ದುರಸ್ಥಿಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |



ಮು.ತಿ.ನೋ.

Scanned by CamScanner

